5. ಶ್ರೀಮತಿ ಅಂದನೂರು ಶೋಭ, ನಿರ್ದೇಶಕರು, ದೂರ ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

6. ಪ್ರೊ। ಸುಕನ್ಯ ಮಾರುತಿ, ಕನ್ನಡ ಪ್ರಾಧ್ಯಾಪಕರು, ಧಾರವಾಡ

7. ಶ್ರೀ ಬಿ.ಆರ್. ಶ್ರೀನಿವಾಸಮೂರ್ತಿ, ಮಾಜಿ ಪುರಸಭಾ ಅಧ್ಯಕ್ಷರು, ಮದ್ದೂರು

ಈ) 1. ಅಕ್ಷರ ಸಾಹಿತ್ಯ ಯೋಜನೆಯಲ್ಲಿ ಕನ್ನಡ ಅನುಷ್ಠಾನವನ್ನು ಸುಗಮಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕೆಳಕಂಡ ಪುಸ್ತಕಗಳನ್ನು ಪ್ರಕಟಿಸಲಾಗಿದೆ:–

1. ಆಡಳಿತ ಪದವಿವರಣ ಕೋಶ
2. ಕಂಪ್ಯೂಟರ್ ಪದವಿವರಣ ಕೋಶ
3. ವಿಶ್ವವಿದ್ಯಾಲಯ ಪದವಿವರಣ ಕೋಶ
4. ಸಮೂಹ ಮಾಧ್ಯಮ ಪದವಿವರಣ ಕೋಶ
5. ಆಡಳಿತದಲ್ಲಿ ಕನ್ನಡ
6. ಕರ್ನಾಟಕ ಸಂಗಾತಿ

**ಕನ್ನಡ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಬಗ್ಗೆ**

4120 (4746) : ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಸಾಹಿತ್ಯ ಪರಿಷತ್ ವಿವಿಧ ವಿಶ್ವವಿದ್ಯಾನಿಲಯಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಾಗೂ ವಿವಿಧ ಸಂಘ ಸಂಸ್ಥೆಗಳು ಪ್ರಕಟಿಸಿರುವ ಎಷ್ಟು ಕನ್ನಡ ಪುಸ್ತಕಗಳು ಸರ್ಕಾರದ ದಾಸ್ತಾನಿನಲ್ಲಿದೆ (ಸಂಸ್ಥೆವಾರು ದಾಸ್ತಾನಿನಲ್ಲಿರುವ ಪುಸ್ತಕದ ಮಾಹಿತಿ ಒದಗಿಸುವುದು)

ಆ) ಇವುಗಳನ್ನು ಮಾರಾಟ ಮಾಡದೆ ಸರ್ಕಾರವು ದಾಸ್ತಾನಿನಲ್ಲಿ ಇಟ್ಟಿರುವುದರ ಉದ್ದೇಶವೇನು;

ಇ) ಸಾರ್ವಜನಿಕರಿಗೆ ಈ ಎಲ್ಲಾ ಪುಸ್ತಕಗಳನ್ನು ಅರ್ಧಬೆಲೆಗೆ ಮಾರಾಟ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಈ) ಹಾಗಿದ್ದರೆ ಈ ಪುಸ್ತಕಗಳನ್ನು ಯಾವಾಗ ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಪ್ರಸ್ತಾಪ ಇಲ್ಲದಿದ್ದಲ್ಲಿ ಸಾರ್ವಜನಿಕರಿಗೆ ಪುಸ್ತಕ ಒದಗಿಸುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು):

ಅ) ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

**ಕೆ.ಆರ್. ಆಸ್ಪತ್ರೆಯನ್ನು ಸ್ವಾಯುತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವ ಬಗ್ಗೆ**

4122 (4525) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯನ್ನು ಸ್ವಾಯುತ್ತ ಸಂಸ್ಥೆಯನ್ನಾಗಿ ಮಾಡಲಾಗುವುದೆಂಬ ವಿಚಾರ ನಿಜವೇ;